Clip: 1 of 1

India Media Monitor

# Kannada Prabha

## Equalise number of UG,.PG medical seats

Date: 30/07/2013 | Edition: Bangalore | Page: 2 | Source: Bureau | Clip size (cm): W: 15 H: 16

### 40,600 ವೈದ್ಯ ಪದವಿ ಸೀಟುಗಳು, ಬರೀ 12 ಸಾವಿರ ಪಿಜಿ ಸೀಟುಗಳು

# ವೈದ್ಯ ಸೀಟುಗಳಿಗೆ ಸರಿಯಾಗಿ ಪಿಜಿ ಹೆಚ್ಚಿಸಿ

**ಕ.ಪ್ರ.ವಾರ್ತೆ | ಬೆಂಗಳೂರು | ಜು. 29**

ವೈದ್ಯ ಪದವಿ ಸೀಟುಗಳಿಗೆ ಸಮನಾಗಿ ಸ್ನಾತಕೋತ್ತರ ಸೀಟುಗಳನ್ನು ಹೆಚ್ಚಿಸಬೇಕು ಎಂದು ಭಾರತೀಯ ವೈದ್ಯಕೀಯ ಪರಿಷತ್ತಿನ ಮಾಜಿ ಸದಸ್ಯ ಡಾ. ದೇವಿಪ್ರಸಾದ ಶೆಟ್ಟಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ದೇಶದಲ್ಲಿ ತಜ್ಞ ವೈದ್ಯರ ಕೊರತೆ ನೀಗಿಸಲು ಕೇಂದ್ರ ಸರ್ಕಾರ ಸ್ನಾತಕೋತ್ತರ ಸೀಟುಗಳ ಸಂಖ್ಯೆ ಹೆಚ್ಚಿಸಬೇಕು. ಗ್ರಾಮೀಣ ಪ್ರದೇಶದಲ್ಲಿ 1 ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎನ್ನುವ ನಿಯಮವನ್ನು ಬದಲಿಸಿ ಪದವಿ ಶಿಕ್ಷಣದ ಪಿಜಿ ತರಬೇತಿ ಹಾಗೂ ಇಂಟರ್ನ್‌ಶಿಪ್‌ನಲ್ಲಿ ಗ್ರಾಮೀಣ ಸೇವೆಯನ್ನು ಸೇರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸೋಮವಾರ ಅವರು 'ಸೇವ್ ದ ಡಾಕ್ಟರ್' ಆಂದೋಲನಕ್ಕೆ ಚಾಲನೆ ನೀಡಿದರು. ದೇಶದ ವಿವಿಧ ನಗರಗಳಿಂದ ಆಗಮಿಸಿದ್ದ ವೈದ್ಯಕೀಯ ವಿದ್ಯಾರ್ಥಿಗಳು, ಭಾರತೀಯ ವೈದ್ಯ ಸಂಘ ಹಾಗೂ ಅಸೋಸಿಯೇಷನ್ ಆಫ್ ಹೆಲ್ತ್ ಕೇರ್ ಪ್ರೊವೈಡರ್ಸ್ ಸೇವ್ ದ ಡಾಕ್ಟರ್ ಚಳವಳಿಗೆ ಚಾಲನೆ ನೀಡಿದರು.

ಚಳವಳಿ ಮೂಲಕ ನೀತಿ ರೂಪಕರು, ವೈದ್ಯಕೀಯ ಸಂಸ್ಥೆಗಳ ಮೇಲೆ ಸೀಟು ಹೆಚ್ಚಿಸಲು ಒತ್ತಡ ಹೇರಲಾಗುತ್ತದೆ ಎಂದು ದೇವಿಪ್ರಸಾದ ಶೆಟ್ಟಿ ಹೇಳಿದರು.

ದೇಶದಲ್ಲಿ ತಜ್ಞ ವೈದ್ಯರ ಕೊರತೆ ಇದೆ. ಭಾರತದಲ್ಲಿ ಪ್ರತಿ 2 ಸಾವಿರ ಜನರಿಗೆ ಕೇವಲ ಒಬ್ಬ ವೈದ್ಯರಿದ್ದಾರೆ. ಇದು ಜಾಗತಿಕ ಮಟ್ಟಕ್ಕೆ ಹೋಲಿಸಿದರೆ ಶೇ.40ರಷ್ಟು ಕಡಿಮೆ. ಸಾಮಾನ್ಯ ವೈದ್ಯರ ಸಂಖ್ಯೆಯಲ್ಲಿ ಶೇ.40



- **ತಜ್ಞ ವೈದ್ಯರ ಕೊರತೆಯಿಂದ ಪ್ರತಿ 10 ನಿಮಿಷಕ್ಕೆ ಒಂದು ನವಜಾತ ಶಿಶು ಸಾವು**
- **ಭಾರತದಲ್ಲಿ ಜನಿಸುವ 2.8 ಕೋಟಿ ಮಕ್ಕಳಿಗೆ ಬರೀ 40 ಸಾವಿರ ಪ್ರಸೂತಿ ತಜ್ಞರು**

ಕಡಿಮೆ ಇದೆ. ಆದರೆ ತಜ್ಞ ವೈದ್ಯರ ಪ್ರಮಾಣ ಇನ್ನು ಕಡಿಮೆ ಇದೆ ಎಂದರು.

**ಮನೆಯಲ್ಲೇ ವಿದ್ಯಾಭ್ಯಾಸ:** ಪ್ರತಿ ವರ್ಷ ದೇಶದ 500ಕ್ಕೂ ಹೆಚ್ಚು ವೈದ್ಯ ಕಾಲೇಜುಗಳಿಂದ 45,600 ವಿದ್ಯಾರ್ಥಿಗಳು ಎಂಬಿಬಿಎಸ್ ಪದವಿ ಪಡೆಯುತ್ತಾರೆ. ಈ ಪೈಕಿ ಕೇವಲ 12 ಸಾವಿರ ಪದವಿಧರರಿಗೆ ಮಾತ್ರ ಸ್ನಾತಕೋತ್ತರ ಸೀಟು ದೊರೆಯುತ್ತಿವೆ. ಉಳಿದವರು ಉನ್ನತ ಶಿಕ್ಷಣ ಪಡೆಯುವ ಉದ್ದೇಶದಿಂದ ಪ್ರ್ಯಾಕ್ಟಿಸ್ ಮಾಡದೆ ಮನೆಯಲ್ಲಿ ಕುಳಿತು ಓದುತ್ತಿದ್ದಾರೆ. ಇದರಿಂದ ಲಕ್ಷಾಂತರ ಪದವಿದರ ವೈದ್ಯರು ವೈದ್ಯಕೀಯ ಸೇವೆಗೆ ಲಭ್ಯರಾಗುತ್ತಿಲ್ಲ ಎಂದರು.

ಪ್ರತಿ ವರ್ಷ ನಡೆಯುವ ಎನ್ಇಇಟಿ ಪರೀಕ್ಷೆಯಲ್ಲಿ 1 ಲಕ್ಷಕ್ಕೂ ಹೆಚ್ಚು ಜನ ಪರೀಕ್ಷೆ ಬರೆಯುತ್ತಾರೆ. ಆದರೆ ಬರೀ 12 ಸಾವಿರ ಪಿಜಿಗೆ ತೆರಳುತ್ತಾರೆ. ಅದರಲ್ಲೂ 1 ವರ್ಷ ಗ್ರಾಮೀಣ ಸೇವೆ ಕಡ್ಡಾಯಗೊಳಿಸಿರುವುದು ಗಾಯದ ಮೇಲೆ ಉಪ್ಪು ಸುರಿದಂತಾಗಿದೆ ಎನ್ನುತ್ತಾರೆ ಡಾ. ದೇವಿಪ್ರಸಾದ ಶೆಟ್ಟಿ.

ಕಾರ್ಯಕ್ರಮದಲ್ಲಿ ಮಾತನಾಡಿದ ಐಎಂಎ ಕಾರ್ಯದರ್ಶಿ ಡಾ. ನರೇಂದ್ರ ಸೈನಿ, ಗ್ರಾಮೀಣ ಪ್ರದೇಶದಲ್ಲಿ ಸೇವೆ ಮಾಡುವ ಸರ್ಕಾರದ ನಿರ್ಧಾರಕ್ಕೆ ಬೆಂಬಲವಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಅವರು ಕರ್ತವ್ಯ ನಿರ್ವಹಿಸುವಷ್ಟು ಹುದ್ದೆಗಳಿಲ್ಲ. ಹೀಗಾಗಿ ಪದವಿಯಲ್ಲೇ 6 ತಿಂಗಳ ಗ್ರಾಮೀಣ ಸೇವೆಯನ್ನು ಸೇರಿಸಬೇಕು. ಪ್ರತಿ ವೈದ್ಯಕೀಯ ಅಧಿಕಾರಿ ತನ್ನ ಕರ್ತವ್ಯದ ಅವಧಿಯಲ್ಲಿ ನಾಲ್ಕೈದು ಮುಂಬಡ್ತಿ ಪಡೆಯುತ್ತಾರೆ. ಪ್ರತಿ ಬಾರಿ ಮುಂಬಡ್ತಿ ಪಡೆದಾಗಲು ಅವರು ಗ್ರಾಮಾಂತರ ಪ್ರದೇಶದಲ್ಲಿ 1 ವರ್ಷ ಸೇವೆ ಮಾಡುವಂತ ನಿಯಮ ರೂಪಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಮಾತನಾಡಿದ ಚಳವಳಿ ಸಂಯೋಜಕ ಡಾ. ನವನೀತ್ ಮೋರ್ತಜಾ, ದೇಶದಲ್ಲಿನ ಸ್ಥಿತಿ ಬದಲಾಗದಿದ್ದಲ್ಲಿ ಮುಂದೊಂದು ದಿನ ಸರ್ಜನ್‌ಗಳನ್ನು ವಿದೇಶಗಳಿಂದ ಅಮದು ಮಾಡಿಕೊಳ್ಳುವ ಪರಿಸ್ಥಿತಿ ಉದ್ಭವವಾದರೂ ಆಶ್ಚರ್ಯವಿಲ್ಲ ಎಂದರು.